ಗುರು ಮಧ್ವ ರಾಯರಿಗೆ ನಮೋ ನಮೋ

ಗುರು ಮಧ್ವ ಸಂತತಿಗೆ ನಮೋ ನಮೋ

ಶ್ರೀಪಾದರಜರಿಗೆ ಗುರು ವ್ಯಾಸರಾಜರಿಗೆ

ಗುರು ವಾದಿರಾಜರಿಗೆ ನಮೋ ನಮೋ

ರಾಘವೇಂದ್ರ ರಾಯರಿಗೆ ವೈಕುಂಠ ದಾಸರಿಗೆ

ಪುರಂದರ ದಾಸರಿಗೆ ನಮೋ ನಮೋ

ಗುರು ವಿಜಯ ದಾಸರಿಗೆ ಭಾಗಣ್ಣ ದಾಸರಿಗೆ

ಶ್ರೀ ರಂಗ ವಲಿದ ದಾಸರಿಗೆ ನಮೋ ನಮೋ

ಪರಮ ವೈರಾಗ್ಯಶಲಿ ತಿಮ್ಮಣ್ಣ ದಾಸರಿಗೆ

ಹುನ್ದೆಕಾರ ದಾಸರಿಗೆ ನಮೋ ನಮೋ

ಗುರು ಶ್ರೀಶ ವಿಠಲನ ಪರಮ ಭಕ್ತರ ಚರಣ

ಸರಸಿಜ ಯುಗಗಳಿಗೆ ನಮೋ ನಮೋ